# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : **680**
**ಸದಸ್ಯರ ಹೆಸರು** : **ಶ್ರೀ.ಸಿ.ಆರ್.ಮನೋಹರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**
**ಉತ್ತರಿಸಬೇಕಾದ ದಿನಾಂಕ** : **14-12-2020**
**ಉತ್ತರಿಸುವ ಸಚಿವರು** : **ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ**

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕೊರೋನಾ ಕಾಲದಲ್ಲಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿರುವ ವಿದ್ಯಾರ್ಥಿಗಳಿಗೆ ಎಷ್ಟು ಆನ್ ಲೈನ್ ತರಗತಿಗಳನ್ನು ನಡೆಸಲಾಗಿದೆ? | 1) ಮಕ್ಕಳಿಗೆ ಕಲಿಕಾ ಅವಕಾಶಗಳನ್ನು ಕಲ್ಪಿಸುವ ನಿಟ್ಟಿನಲ್ಲಿ 5 ರಿಂದ 10ನೇ ತರಗತಿಗಳ ವೀಡಿಯೋ ಪಾಠಗಳನ್ನು ತಯಾರಿಸಿ ದಿನಾಂಕ 20.07.2020ರಿಂದ ಪ್ರಥಮ ಭಾಷೆ ಕನ್ನಡ, ಸಂಸ್ಕೃತ, ಉರ್ದು ಹಾಗೂ ಇಂಗ್ಲಿಷ್. ದ್ವಿತೀಯ ಭಾಷೆ ಇಂಗ್ಲಿಷ್, ತೃತೀಯ ಭಾಷೆ ಹಿಂದಿ ಹಾಗು ಕನ್ನಡ ಮಾಧ್ಯಮದಲ್ಲಿ ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನದ ವೀಡಿಯೋ ಪಾಠಗಳನ್ನು ದೂರದರ್ಶನ ಚಂದನ ವಾಹಿನಿಯಲ್ಲಿ ಸೋಮವಾರದಿಂದ ಶುಕ್ರವಾರದವರೆಗೆ ಪ್ರತಿ ದಿನ 30 ನಿಮಿಷಗಳ ಅವಧಿಯಂತೆ 8 ಪಾಠಗಳನ್ನು ಪ್ರಸಾರ ಮಾಡಲಾಗುತ್ತಿದೆ.<br>2) ದಿನಾಂಕ; 23.11.2020ರಿಂದ 5 ರಿಂದ 7ನೇ ತರಗತಿವರೆಗೆ ಪ್ರಥಮ ಭಾಷೆ ಕನ್ನಡ, ದ್ವಿತೀಯ ಭಾಷೆ ಇಂಗ್ಲೀಷ್, ತೃತೀಯ ಭಾಷೆ ಹಿಂದಿ ಹಾಗೂ ಕನ್ನಡ ಮಾಧ್ಯಮದಲ್ಲಿ ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನ ವಿಷಯಗಳಲ್ಲಿ ವೀಡಿಯೋ ಪಾಠಗಳನ್ನು ದೂರದರ್ಶನ ಚಂದನ ವಾಹಿನಿಯಲ್ಲಿ ಸೋಮವಾರದಿಂದ ಶುಕ್ರವಾರದವರೆಗೆ ಪ್ರತಿ ದಿನ 30 ನಿಮಿಷಗಳ ಅವಧಿಯಂತೆ 4 ಪಾಠಗಳನ್ನು ಪ್ರಸಾರ ಮಾಡಲಾಗುತ್ತಿದೆ. ಸದರಿ ಕಾರ್ಯಕ್ರಮ ರಾಜ್ಯದಾದ್ಯಂತ ದೂರದರ್ಶನ ಚಂದನ ವಾಹಿನಿಯಲ್ಲಿ ಪ್ರಸಾರವಾಗುತ್ತಿದೆ.<br>3) ಸದರಿ ಪಾಠಗಳನ್ನು ಇಲಾಖಾ ಯೂ-ಟ್ಯೂಬ್ ಚಾನಲ್ ಜ್ಞಾನದೀಪ, ದೂರದರ್ಶನ ಚಂದನ ವಾಹಿನಿಯ ಯೂ-ಟ್ಯೂಬ್ ಹಾಗೂ ಮಕ್ಕಳವಾಣಿಯಲ್ಲಿ ಅಪ್‌ಲೋಡ್ ಮಾಡಲಾಗುತ್ತಿದೆ. ಈ ವೀಡಿಯೋ ಪಾಠಗಳನ್ನು ದೀಕ್ಷಾ ಪೋರ್ಟಲ್‌ನಲ್ಲಿಯೂ ಸಹ ಅಪ್‌ಲೋಡ್ ಮಾಡಲಾಗಿದೆ. ವೀಡಿಯೋ ಪಾಠಗಳು, ವಿವರಣಾತ್ಮಕ ವೀಡಿಯೋಗಳು, ಅಭ್ಯಾಸ ಚಟುವಟಿಕೆಗಳು ಮತ್ತು ಮೌಲ್ಯಮಾಪನ ಚಟುವಟಿಕೆಗಳನ್ನು ಅಳವಡಿಸಿದ್ದು, ಇವುಗಳನ್ನು ಬಳಸಿಕೊಂಡು ವಿದ್ಯಾರ್ಥಿಗಳು ಕಲಿಕೆಯಲ್ಲಿ ತೊಡಗಿಕೊಳ್ಳುತ್ತಿರುತ್ತಾರೆ. |

| | | |
|---|---|---|
| ಆ) | ಆನ್‌ಲೈನ್ ತರಗತಿಗಳು ಯಾವ ದಿನಾಂಕದಿಂದ ನಡೆಯುತ್ತಿವೆ? | ದಿನಾಂಕ 20.07.2020ರಿಂದ ಪ್ರಾರಂಭಿಸಲಾಗಿದೆ. |
| ಇ) | ಮಕ್ಕಳ ಹಾಜರಾತಿ ಪ್ರಮಾಣವೆಷ್ಟು? | ಈ ಸಂವೇದ ತರಗತಿಗಳಿಗೆ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಶೇಕಡ 80% ಹಾಗೂ ಕೋಲಾರ ಜಿಲ್ಲೆಯಲ್ಲಿ 90% ರಷ್ಟು ವಿದ್ಯಾರ್ಥಿಗಳು ಹಾಜರಾಗುತ್ತಿದ್ದಾರೆ. |
| ಈ) | ಮೊಬೈಲ್, ಇಂಟರ್‌ನೆಟ್ ಇಲ್ಲದ ಮಕ್ಕಳೆಷ್ಟು? | ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ: 9695<br>ಕೋಲಾರ ಜಿಲ್ಲೆಯಲ್ಲಿ 40,000 ವಿದ್ಯಾರ್ಥಿಗಳಿಗೆ ಮೊಬೈಲ್ ಇಂಟರ್ ನೆಟ್ ವ್ಯವಸ್ಥೆ ಇರುವುದಿಲ್ಲ |
| ಉ) | ಮೊಬೈಲ್, ಲ್ಯಾಪ್ ಟಾಪ್, ಇಂಟರ್ ನೆಟ್ ಇಲ್ಲದ ವಿದ್ಯಾರ್ಥಿಗಳು ಆನ್ ಲೈನ್ ತರಗತಿಗಳಿಗೆ, ಹೇಗೆ ಹಾಜರಾಗುತ್ತಾರೆ?( ವಿವರ ನೀಡುವುದು) | ಮೊಬೈಲ್, ಲ್ಯಾಪ್ ಟಾಪ್, ಇಂಟರ್ ನೆಟ್ ಇಲ್ಲದ ವಿದ್ಯಾರ್ಥಿಗಳು ಆನ್ ಲೈನ್ ತರಗತಿಗಳಿಗೆ ಹಾಜರಾಗಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಸರ್ಕಾರಿ ಶಾಲಾ ಮಕ್ಕಳ ಸಾಮಾಜಿಕ ಪರಿಸ್ಥಿತಿ ಹಿನ್ನೆಲೆಯನ್ನು ಅರಿತ ಇಲಾಖೆಯು "ವಿದ್ಯಾಗಮ" ಯೋಜನೆಯನ್ನು ಜಾರಿಗೊಳಿಸಿತ್ತು. ಇದರೊಂದಿಗೆ ನಿರಂತರವಾಗಿ ಚಂದನ ದೂರದರ್ಶನ ವಾಹಿನಿಯಲ್ಲಿ ಪಾಠಗಳನ್ನು ಭಿತ್ತರಿಸಲಾಗುತ್ತಿದೆ. |

ಸಂಖ್ಯೆ: ಇಪಿ 172 ಎಂ.ಹೆಚ್.ಟಿ 2020

**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು**